48

**ಕರ್ನಾಟಕ ವಿಧಾನ ಪರಿಷತ್ತು**
**ಶೂನ್ಯವೇಳೆ ಪ್ರಸ್ತಾಪ**
**ಮಾನ್ಯ ಸದಸ್ಯರಾದ ಶ್ರೀ ಬಿ.ಕೆ.ಹರಿಪ್ರಸಾದ್,ಇವರ ಶೂನ್ಯ ವೇಳೆಯಲ್ಲಿ ಪ್ರಸ್ತಾಪ :-**

**ರಾಜ್ಯದಲ್ಲಿ ಈಡಿಗ/ಬಿಲ್ಲವ ಸಮುದಾಯವು ಶೇಂದಿ ಇಳಿಸಿ ಮಾರಾಟ ಮಾಡುವ ಕಾಯಕದಲ್ಲಿ ತೊಡಗಿಸಿಕೊಂಡು ಬದಲಾದ ದಿನಮಾನದಲ್ಲಿ ಕುಲಕಸುಬನ್ನು ಮುಂದುವರೆಸಿಕೊಂಡು ಬಂದಿರುವ ಬಗ್ಗೆ**

***

**<u>ಶೂನ್ಯ ವೇಳೆಯಲ್ಲಿ ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ನೀಡಿರುವ ಸೂಚನೆ:-</u>**

ರಾಜ್ಯದಲ್ಲಿ ಈಡಿಗ/ಬಿಲ್ಲವ ಸಮುದಾಯವು ಶತಮಾನಗಳಿಂದ ಶೇಂದಿ ಇಳಿಸಿ ಮಾರಾಟ ಮಾಡುವ ಕಾಯಕದಲ್ಲಿ ತೊಡಗಿಕೊಂಡು ಸಮಾಜದ ಭಾಗವಾಗಿದ್ದರೂ ಬದಲಾದ ದಿನಮಾನಗಳಲ್ಲಿ ಕುಲಕಸುಬನ್ನು ತೊರೆಯಲಾಗದೆ ಮುಂದುವರೆಸಿಕೊಂಡು ಬರುತ್ತಾ ಹಲವು ಪೀಳಿಗೆಗಳ ಹಸಿವು ನೀಗಿಸುವ ಕಾಯಕದಲ್ಲಿ ನಿರತವಾಗಿರುವುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ.

ಆದಾಗ್ಯೂ ವೃತ್ತಿ ಪೋಷಣೆ ಮಾಡಲಾಗದ ಶೇ.25ಕ್ಕೂ ಹೆಚ್ಚಿನ ಮಂದಿ ಮೂಲ ಕಸುಬನ್ನು ಅನಿವಾರ್ಯವಾಗಿ ತೊರೆಯಬೇಕಾದುದು ವಿಷಾದದ ಸಂಗತಿಯಾಗಿದೆ. ಇನ್ನುಳಿದವರು ವೃತ್ತಿ ಪೋಷಣೆ ಮತ್ತು ಸರ್ಕಾರದ ಅಬಕಾರಿ ನೀತಿಗಳಿಗೆ ಹೊಂದಿಕೊಂಡು ವೃತ್ತಿಯನ್ನು ಮುನ್ನಡೆಸುತ್ತಿದ್ದಾರೆ. ಈ ಹಿಂದೆ ಇವರಿಗೆ ಅಬಕಾರಿ ಮೂಲದಿಂದ ದೊರೆಯುತ್ತಿದ್ದ ಶೇ.20ರಷ್ಟು ಲಾಭಾಂಶವು ಶೇ.10ಕ್ಕೆ ಕುಸಿತಗೊಂಡಿರುವುದು ಮುಖ್ಯ ಆತಂಕಕ್ಕೆ ಕಾರಣವಾಗಿದೆ. ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿನ ಈಡಿಗ/ಬಿಲ್ಲವ ಸಮಾಜದ ಆರ್ಥಿಕ ವ್ಯವಸ್ಥೆ ಅಸ್ತವ್ಯಸ್ಥಗೊಂಡು ದುರ್ಬಲಗೊಂಡಿರುತ್ತದೆ. ಕಾನೂನುಗಳ ದುರ್ಬಳಕೆ, ಜಾಮೀನಿಲ್ಲದ ಪ್ರಕರಣಗಳಲ್ಲಿ ಇವರುಗಳನ್ನು ಆರೋಪಿತ ಸ್ಥಾನದಲ್ಲಿ ನಿಲ್ಲಿಸುವುದು, ಉದ್ದೇಶಪೂರ್ವಕ ದಾವೆಗಳನ್ನು ಹೂಡುವುದು ಇಂತಹ ಶೋಷಣೆ ಹೆಚ್ಚಾಗಿದ್ದು, ಹಣಬಲ ಉಳ್ಳವರ ಸಂಖ್ಯೆ ಹೆಚ್ಚಾಗಿ ಮೂಲ ಕುಲಕಸುಬುದಾರರನ್ನು ಈ ವೃತ್ತಿಯಿಂದ ಹೊರದಬ್ಬುವ ಕೆಲಸ ಅವಿರತವಾಗಿ ಸಾಗುತ್ತಾ ಬರುತ್ತಿದೆ.

ದಯಮಾಡಿ, ಅಬಕಾರಿ ಉದ್ಯಮದಲ್ಲಿ ತೊಡಗಿರುವ ಈಡಿಗ/ಬಿಲ್ಲವ ಸಮಾಜದ ಉದ್ದಿಮೆದಾರರಿಗೆ ಶೇ.20ರಷ್ಟು ಲಾಭಾಂಶ ನೀಡುವುದನ್ನು ಮುಂದುವರೆಸಬೇಕು, ವಿಧಿಸಿರುವ ಸನ್ನದು ಶುಲ್ಕವನ್ನು ಹಿಂಪಡೆಯಬೇಕು. ಮೂಲ ಕಸುಬುದಾರರ ಹಿತಕ್ಕಾಗಿ ರಾಜ್ಯ ಫೆಡೇರೇಷನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಷನ್‌ರವರು ನೀಡಿರುವ ಸಲಹೆಗಳನ್ನು ಪರಿಗಣಿಸಬೇಕು. ತೆಲಂಗಾಣ ಮಾದರಿಯಲ್ಲಿ ಅಲ್ಲಿನ ಗೌಡ ಸಮುದಾಯಕ್ಕೆ ನೀಡಲಾದ ವ್ಯವಹಾರಿಕ ಬೆಂಬಲದ ಜೊತೆಗೆ ವ್ಯವಹಾರಿಕ ಲಾಭಾಂಶವನ್ನು ರಾಜ್ಯದ ಸ್ಥಳೀಯ ಈಡಿಗ/ಬಿಲ್ಲವ ಸಮುದಾಯದ ಮೂಲ ಕಸುಬುದಾರರಿಗೆ/ಸನ್ನದುದಾರರಿಗೆ ನೀಡಲು ಸರ್ಕಾರದ ಮಟ್ಟದಲ್ಲಿ ಒಂದು ಸಮಿತಿ ರಚಿಸಿ ಸಮಿತಿ ವರದಿಯನ್ನು ಕಾಲಮಿತಿಯೊಳಗೆ ಅನುಷ್ಠಾನಕ್ಕೆ ತರಲು ಕ್ರಮ ಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಉತ್ತರ:- 2009 ನೇ ಸಾಲಿನಿಂದ ಚಿಲ್ಲರೆ ಮದ್ಯ ಮಾರಾಟದ ಮೇಲೆ ಶೇ. 10 ರಷ್ಟು ಲಾಭಾಂಶವನ್ನು ಮದ್ಯ ಮಾರಾಟಗಾರರಿಗೆ ಸರ್ಕಾರವು ನಿಗಧಿಪಡಿಸಿರುತ್ತದೆ. ಫೆಡರೇಷನ್ ಆಫ್ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ ರವರು ಸದರಿ ಲಾಭಾಂಶವನ್ನು ಶೇ. 20 ಕ್ಕೆ ಹೆಚ್ಚಿಸಲು ಮನವಿ ಸಲ್ಲಿಸಿದ್ದು, ಚಿಲ್ಲರೆ ಮದ್ಯ ಮಾರಾಟದ ಮೇಲಿನ ಲಾಭಾಂಶವನ್ನು ಹೆಚ್ಚಿಸುವುದು ಸರ್ಕಾರದ ನೀತಿ ನಿರ್ಣಯದ ವಿಷಯವಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಫೆಡರೇಷನ್ ಆಫ್ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ ರವರು ಸಲ್ಲಿಸಿರುವ ಬೇಡಿಕೆ/ಸಲಹೆಗಳು ಕುರಿತು ಇಲಾಖೆಯ ಅಭಿಪ್ರಾಯವನ್ನು ದಿನಾಂಕ:17-06-2025 ರಂದು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ ಈ ಬೇಡಿಕೆ/ಸಲಹೆಗಳನ್ನು ಪರಿಗಣಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಪ್ರಸ್ತುತ ಎಲ್ಲಾ ಅಬಕಾರಿ ಶುಲ್ಕವನ್ನು ಕಾಲಕಾಲಕ್ಕೆ ಪರಿಶೀಲಿಸಿ ಕ್ರಮವಹಿಸಲಾಗುತ್ತಿದೆ. ಪ್ರಸ್ತುತ ಅಬಕಾರಿ ವರ್ಷದಲ್ಲಿಯೂ ಸಹ ಸನ್ನದು ಶುಲ್ಕಗಳನ್ನು ಪರಿಷ್ಕರಿಸಲಾಗಿದ್ದು, ಸನ್ನದುದಾರರಿಗೆ ಎರಡು ಕಂತುಗಳಲ್ಲಿ ಸನ್ನದು ಶುಲ್ಕಗಳನ್ನು ಪಾವತಿಸುವ ಅವಕಾಶ ನೀಡಲಾಗಿರುತ್ತದೆ. ಸನ್ನದುದಾರರ ಹಿತ ಕಾಪಾಡುವ ದೃಷ್ಟಿಯಿಂದ ಸನ್ನದು ನವೀಕರಣ ಅವಧಿಯನ್ನು ಒಂದು ವರ್ಷದ ಬದಲಾಗಿ ಐದು ವರ್ಷಗಳಿಗೊಮ್ಮೆ ನವೀಕರಿಸಲು ಅವಕಾಶ ಕಲ್ಪಿಸಿ ನಿಯಮಗಳಿಗೆ ತಿದ್ದುಪಡಿ ಮಾಡಲಾಗಿದೆ.

**ಆಇ 81 ಇಎಲ್‌ಕ್ಯೂ 2025**

(ಆರ್.ಬಿ.ತಿಮ್ಮಾಪುರ)

ಅಬಕಾರಿ ಸಚಿವರು



File No. FD/81/ELQ/2025-EXCISE-FINANCE DEPT.SEC (Computer No. 1880483)
Generated from eOffice by Ramanna Balanna Timmapur, MIN-EXC(RBT), MINISTER, Minister - Excise on 14/08/2025 01:34 PM